# ಅಂಗೈ ಅಂದಕ್ಕೆ ಮೆಹಂದಿ



* ಶ್ರೀಕಾಂತಿ ಹೆಬ್ರಿ



ಚಿತ್ರ: ಲೇಖಕರದು

ಮದುವೆ ಎಂದರೆ ನಿಶ್ಚಿತಾರ್ಥದ ಶಾಸ್ತ್ರ, ಮದರಂಗಿ ಶಾಸ್ತ್ರ, ಮುಹೂರ್ತ ಶಾಸ್ತ್ರ, ಧಾರೆ ಶಾಸ್ತ್ರ ಹಾಗೂ ಸಪ್ತಪದಿ ಶಾಸ್ತ್ರ ಹೀಗೆ ಹಲವು ಶಾಸ್ತ್ರಗಳಿಂದ ಕೂಡಿದ ಹಬ್ಬದ ಸಂಭ್ರಮ.

ಮದುವೆಯ ಮುನ್ನ ಮಾಡುವ ಶಾಸ್ತ್ರಗಳಲ್ಲಿ ನಿಶ್ಚಿತಾರ್ಥ ಒಂದಾದರೆ, ಮತ್ತೊಂದು ಮದರಂಗಿ ಶಾಸ್ತ್ರ. ಮದುವೆಯ ಮುನ್ನಾ ದಿನ ಹತ್ತಿರದಲ್ಲೆಲ್ಲೋ ಸಿಗುವ ಮದರಂಗಿ ಗಿಡಗಳನ್ನು ಹುಡುಕಿಕೊಂಡು ಹೋಗಿ ಅದರ ಎಲೆಗಳನ್ನೆಲ್ಲಾ ಕೊಯ್ದು ತಂದು ಮನೆಯಲ್ಲಿನ ರುಬ್ಬುವ ಕಲ್ಲಿಗೆ ಹಾಕಿ ಚಟ್ನಿಯಂತೆ ಮಾಡಿ ಕೈಗೆ ಹಚ್ಚಿಕೊಳ್ಳುವ ಪರಿ ಹೇಳತೀರದು. ಕಡು ಕೆಂಪು ಬಣ್ಣ ಬರಲೆಂದು ಸ್ವಲ್ಪ ಸುಣ್ಣ ಮತ್ತು ಹುಣಸೆ ಹಣ್ಣು ಹಾಕಿ ರುಬ್ಬುವರು. ಇದನ್ನು ಮದುಮಗಳ ಕೈಗೆ ಶಾಸ್ತ್ರೋಕ್ತವಾಗಿ ವೀಳ್ಯದೆಲೆ ಇಟ್ಟು, ತುಳಸಿಯ ಮುಂದೆ ಕೂರಿಸಿ, ಹಿರಿಯರು ಎಲೆಯ ಮೇಲೆ ಮದರಂಗಿಯಿಟ್ಟು ಶಾಸ್ತ್ರ ಮಾಡುತ್ತಾರೆ. ನಂತರ ಆಧುನಿಕ ಕಾಲದ ಮೆಹಂದಿ ಕೋನ್‌ನಿಂದ ಕೈಯ ಮೇಲೆ ವಿವಿಧ ರೀತಿಯ ಚಿತ್ತಾರ ಬಿಡಿಸಲಾಗುತ್ತದೆ, ಮೆಹಂದಿ ಕೋನ್‌ನಿಂದ ಚಿತ್ತಾರ ಬಿಡಿಸುವುದು ಒಂದು ಕಲೆಯೇ ಹೌದು. ಅಂಗೈಯ ಸೌಂದರ್ಯಕ್ಕೆ ಮೆಹಂದಿಯ ಕೊಡುಗೆ ಅಪಾರ.

ಮದುವೆಗಳಲ್ಲಿ ಮಾತ್ರವಲ್ಲದೆ ಇತರ ಸಮಾರಂಭಗಳಲ್ಲಿಯೂ ಮದರಂಗಿಯನ್ನು ಹಾಕಿಸಿಕೊಳ್ಳಬಹುದು. ಮಲೆನಾಡಿನ ಕೆಲವೆಡೆಗಳಲ್ಲಿ ನಾಗರಪಂಚಮಿಯಂದು ಮದರಂಗಿ ಹಾಕಿಕೊಳ್ಳುವ ಸಂಪ್ರದಾಯವಿದೆ.

ಅಂಗಡಿಗಳಲ್ಲಿ ಈ ಮೆಹಂದಿ ಕೋನ್‌ಗಳು ಸಿಗುವುದರಿಂದ ಯಾವಾಗಬೇಕಾದರೂ ಮೆಹಂದಿ ಹಾಕಿಸಿಕೊಂಡು ಸಂಭ್ರಮಿಸಬಹುದು. ಹಿಂದಿನ ಕಾಲದವರಂತೆ ಮದುವೆಯ ದಿನಕ್ಕೋ, ಇತರ ಸಮಾರಂಭಗಳಿಗೋ ಕಾಯಬೇಕೆಂದಿಲ್ಲ. ಮಕ್ಕಳಿಂದ ಹಿಡಿದು ವಯಸ್ಸಾದವರವರೆಗೂ ಈ ಮೆಹಂದಿ ಮೋಹ ತಪ್ಪಿದ್ದಲ್ಲ.



## ಮೆಹಂದಿ ಕೋನ್ ತಯಾರಿಸುವುದು ಹೇಗೆ?

ಮೆಹಂದಿ ಕೋನ್‌ಗಳನ್ನು ನಾವು ಮನೆಯಲ್ಲಿಯೇ ತಯಾರಿಸಬಹುದು. ಮೊದಲು 100 ಗ್ರಾಂ ಮೆಹಂದಿ ಪುಡಿ, ಸ್ವಲ್ಪ ಹುಣಸೆಹುಳಿ, 3ರಿಂದ 6 ಲವಂಗ, 4–5 ಡ್ರಾಪ್ಸ್ ನೀಲಗಿರಿ ಎಣ್ಣೆ, 2 ಚಮಚ ಟೀಪುಡಿ, 1 ಲಿಂಬೆಹಣ್ಣು, 2 ಚಮಚ ಸಕ್ಕರೆ ಹಾಗೂ ಸ್ವಲ್ಪ ನೀರನ್ನು ಸಂಗ್ರಹಿಸಿಟ್ಟುಕೊಂಡು ನೀರು, ಹುಣಸೆ ಹುಳಿ, ಟೀ ಪುಡಿ ಇವುಗಳನ್ನು ಒಟ್ಟಿಗೆ ಕುದಿಸಬೇಕು. ಕುದಿಯುತ್ತಿರುವಂತೆಯೇ ಲಿಂಬೆಹಣ್ಣಿನ ರಸ ಹಾಕಬೇಕು, ಈ ಮಿಶ್ರಣ ಕುದಿದು ದಪ್ಪವಾದಾಗ ತಣ್ಣಗಾಗುವವರೆಗೆ ಬಿಟ್ಟು 2 ಬಾರಿ ಸೋಸಬೇಕು, ಸೋಸಿದ ಮಿಶ್ರಣಕ್ಕೆ ಮೊದಲೇ ಗಾಳಿಸಿಟ್ಟುಕೊಂಡ ಮೆಹಂದಿ ಪೌಡರನ್ನು ಗಂಟುಗಳಿಲ್ಲದಂತೆ ಮಿಶ್ರ ಮಾಡಿ, ಈ ಮಿಶ್ರಣಕ್ಕೆ ನೀಲಗಿರಿ ಎಣ್ಣೆಯನ್ನು 4–5 ಹನಿಗಳಂತೆ ಹಾಕಿ ಮಿಶ್ರಣವನ್ನು ಚೆನ್ನಾಗಿ ಕಲಸಬೇಕು. ಈ ಮಿಶ್ರಣವನ್ನು 2 ದಿನಗಳ ಕಾಲ ಗಾಳಿ ತಾಗದಂತೆ ಇಟ್ಟು ನಂತರ ಮಿಶ್ರಣವನ್ನು ಪ್ಲಾಸ್ಟಿಕ್ ಕೋನ್‌ಗಳಲ್ಲಿ ತುಂಬಿಸಿ ಬಳಸಬಹುದು.

ಕೋನ್ ತಯಾರಿಸುವುದು ತುಂಬಾ ಸುಲಭ. ಪ್ಲಾಸ್ಟಿಕ್ ಕವರನ್ನು (ಹಾಲಿನ ಕವರ್) ಬೇಕಾದ ಆಕಾರದಲ್ಲಿ ಕತ್ತರಿಸಿ ಅದರ ಒಂದು ಬದಿಯನ್ನು ಮಧ್ಯದಿಂದ ಮೊದಲ್ಗೊಂಡು ತ್ರಿಕೋನಾಕಾರಕ್ಕೆ ಉರುಟಾಗಿ ಸುತ್ತಿ ನಂತರ ಕೋನ್‌ನೊಳಗೆ 4–5 ಹನಿ ನೀಲಗಿರಿ ಎಣ್ಣೆ ಹಾಕಿ ಮೆಹಂದಿ ಪೇಸ್ಟ್‌ನ್ನು ಮುಕ್ಕಾಲು ಭಾಗದವರೆಗೆ ತುಂಬಿಸಿ ಕೋನ್‌ನ ತುದಿಯ ಭಾಗವನ್ನು ಮಡಚುತ್ತಾ ಗಮ್‌ಟೇಪ್ ಹಾಕಬೇಕು ಆಗ ಕೋನ್ ತಯಾರಾಗಿರುತ್ತದೆ.

ಮೆಹಂದಿ ಕೋನ್‌ಗಳಿಂದ ವಿವಿಧ ಚಿತ್ತಾರಗಳನ್ನು ಬಿಡಿಸಬಹುದು. ಮದರಂಗಿ ಎಲೆಯ ಜಾಗವನ್ನು ಚಿತ್ತಾರ ಬಿಡಿಸುವಲ್ಲಿ ಕೋನ್‌ಗಳು ಆಕ್ರಮಿಸಿದ್ದರೂ, ಶಾಸ್ತ್ರ ಸಂಪ್ರದಾಯಗಳಲ್ಲಿ ಇದು ತನ್ನತನವನ್ನು ಕೋನ್‌ಗಳಿಗೆ ಇಂದಿಗೂ ಬಿಟ್ಟುಕೊಡಲಿಲ್ಲ.

ಕಾಲಿಗೆ, ಕೈಗಳಿಗೆ ಮಾತ್ರವಲ್ಲದೆ ಮದರಂಗಿಯನ್ನು ತಲೆಗೂ ಉಪಯೋಗಿಸುತ್ತಾರೆ. ತಲೆಹೊಟ್ಟು, ಕೂದಲು ಬೆಳ್ಳಗಾಗಿರುವು ಅಥವಾ ಬೆಳ್ಳಗಾಗುವುದನ್ನು ತಡೆಯಲು ಈ ಮದರಂಗಿಯನ್ನು ಉಪಯೋಗಿಸುತ್ತಾರೆ. ಸೌಂದರ್ಯವರ್ಧನೆಗೆ ಇದು ಸಹಕಾರಿ.

ಮದರಂಗಿಯ ಎಲೆ ಮತ್ತು ಬೀಜ ಔಷಧೀಯ ಗುಣಗಳನ್ನು ಹೊಂದಿದೆ ಆದರೂ ಇದನ್ನು ಹೆಚ್ಚಾಗಿ ಶೃಂಗಾರಕ್ಕೆ ಉಪಯೋಗಿಸುವುದರಿಂದ ಇದು ಆರೋಗ್ಯಕ್ಕಿಂತ ಶೃಂಗಾರಕ್ಕೆ ಹೆಚ್ಚು ಹೆಸರುವಾಸಿಯಾಗಿದೆ.